# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 232 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರುಖ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14-02-2024 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಪಡೀಲ್ ಮತ್ತು ಪಂಪ್‌ವೆಲ್‌ವರೆಗಿನ ರಸ್ತೆ ಕಾಮಗಾರಿಗೆ ಅನುಮೋದನೆಗೊಂಡ ಅನುದಾನದ ವಿವರ ನೀಡುವುದು; | ಮಂಗಳೂರಿನ ಪಡೀಲ್ ಮತ್ತು ಪಂಪ್‌ವೆಲ್ ವರೆಗಿನ ರಸ್ತೆ ಕಾಮಗಾರಿಯನ್ನು ಸ್ಮಾರ್ಟ್ ರೋಡ್ ಪ್ಯಾಕೇಜ್-5ರಡಿ ರೂ.25.30 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗಿರುತ್ತದೆ. |
| ಆ) | ಪಡೀಲ್ ಮತ್ತು ಪಂಪ್‌ವೆಲ್‌ವರೆಗಿನ ರಸ್ತೆ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿದ್ದು ಇದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಪಡೀಲ್ ಮತ್ತು ಪಂಪ್‌ವೆಲ್‌ವರೆಗಿನ ರಸ್ತೆಯಲ್ಲಿ ಮುಖ್ಯವಾಗಿ ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಹಾಗೂ 24/7 ನೀರು ಸರಬರಾಜು ಯೋಜನೆಯ ಕಾಮಗಾರಿಗಳು ಏಕಕಾಲಕ್ಕೆ ಅನುಷ್ಠಾನಗೊಳ್ಳುತ್ತಿರುವ ಕಾರಣದಿಂದ ಕಾಮಗಾರಿಗಳು ಪೂರ್ಣಗೊಂಡ ನಂತರವೇ ರಸ್ತೆ ಕಾಮಗಾರಿಯನ್ನು ಮುಂದುವರೆಸಲು ಸಾಧ್ಯವಿರುತ್ತದೆ ಹಾಗೂ ಈ ರಸ್ತೆಯಲ್ಲಿ ಮಂಗಳೂರು ನಗರಕ್ಕೆ ತುಂಬೆ ಡ್ಯಾಂನಿಂದ ಮುಖ್ಯ ನೀರಿನ ಪೈಪ್‌ಗಳು ಹಾದು ಹೋಗುವ ಕಾರಣ ಕಾಮಗಾರಿಯನ್ನು ಅತೀ ಜಾಗರೂಕತೆಯಿಂದ ನಿರ್ವಹಿಸಬೇಕಾಗಿರುತ್ತದೆ.<br>ಪಂಪ್‌ವೆಲ್-ಪಡೀಲ್ ರಸ್ತೆಯ ನಗರದ ಪ್ರಮುಖ ರಸ್ತೆಯಾಗಿದ್ದು, ಅತಿಯಾದ ವಾಹನ ದಟ್ಟಣೆ ಇರುವುದರಿಂದ ಹಾಗೂ ಸದರಿ ರಸ್ತೆಯಲ್ಲಿ ವಾಹನ ಸಂಚಾರ ನಿಯಂತ್ರಣದ ಅವಶ್ಯಕತೆ ಇರುವುದರಿಂದ ಕಾಮಗಾರಿ ಸಮಯದಲ್ಲಿ ವಾಹನ ಸಂಚಾರವನ್ನು ನಿಯಂತ್ರಿಸಿ ಏಕಮುಖ ರಸ್ತೆಯನ್ನಾಗಿ ಪರಿವರ್ತಿಸಲು ಪೋಲೀಸ್ (ಸಂಚಾರ) ಇಲಾಖೆಯನ್ನು ಕೋರಲಾಗಿತ್ತು. ಆದರೆ ಸದರಿ ರಸ್ತೆ ನಗರದ ಮುಖ್ಯ ರಸ್ತೆಯಾದ್ದರಿಂದ ಏಕಮುಖ ಸಂಚಾರಕ್ಕೆ ಅನುಮತಿ ದೊರಕಿರುವುದಿಲ್ಲ.<br>ಮುಂದುವರೆದು, ಸ್ಮಾರ್ಟ್ ರಸ್ತೆ ಪ್ಯಾಕೇಜ್-5 ರಲ್ಲಿ ರಸ್ತೆ ಕಾಂಕ್ರೀಟೀಕರಣ ನಡೆಸಲು ಪ್ರಸ್ತಾವನೆಯಿದ್ದು, ಹಲವಾರು ಬೇಡಿಕೆಯ ಮೇರೆಗೆ ಒಳಚರಂಡಿ ಕಾಮಗಾರಿಯನ್ನು ಮೊದಲು ನಿರ್ವಹಿಸಿ ನಂತರ ರಸ್ತೆ ಕಾಂಕ್ರೀಟೀಕರಣ ನಡೆಸಬೇಕಾಗುತ್ತದೆ.<br>ಸದರಿ ರಸ್ತೆಯಲ್ಲಿ ಅಭಿವೃದ್ಧಿ ಕಾಮಗಾರಿ ನಡೆಸಲು ಭೂ ಸ್ವಾಧೀನದ ಸಮಸ್ಯೆ ಬಗೆಹರಿಯದೇ ಇರುವ ಕಾರಣ ಹಾಗೂ ಸದರಿ ಸಂಪರ್ಕ ರಸ್ತೆಯ ಭೂ ಸ್ವಾಧೀನ ಹಾಗೂ ಒಳಚರಂಡಿ ಜಾಲದ ಕಾಮಗಾರಿಯ ಸ್ಥಳದಲ್ಲಿ ಖಾಸಗಿ ಜಾಗದ ಮಾಲೀಕರಿಂದ ಆಕ್ಷೇಪವಿರುವುದರಿಂದ ಸ್ಮಾರ್ಟ್ ರಸ್ತೆಯ ಕಾಮಗಾರಿಯು ಕುಂಠಿತವಾಗಿರುತ್ತದೆ. |
| ಇ) | ಈ ಕಾಮಗಾರಿಯೂ ಮಂದಗತಿಯಲ್ಲಿ ಸಾಗಲು ಕಾರಣವೇನು ಹಾಗೂ ಈ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; | |

| | | |
|---|---|---|
| | | ಕಾಮಗಾರಿಯ ಪ್ರಸ್ತುತ ಪ್ರಗತಿ ಈ ಕೆಳಕಂಡಂತಿದೆ;<br>• ಪಡೀಲ್ ಮತ್ತು ಪಂಪ್‌ವೆಲ್ ವರೆಗಿನ ರಸ್ತೆಯ ಒಟ್ಟು ಉದ್ದ – 2600ಮೀ. ಈ ಪೈಕಿ 1800 ಮೀ ಉದ್ದ ರಸ್ತೆಯು ಪೂರ್ಣಗೊಂಡಿದೆ. (ಪಂಪ್‌ವೆಲ್‌ನಿಂದ ನಾಗುರಿ-ಗರೋಡಿ ದೇವಸ್ಥಾನದ ರಸ್ತೆಯವರೆಗೆ - 1050ಮೀ ಉದ್ದದ 4ಲೇನ್ ರಸ್ತೆ;ಪಡೀಲ್ ಜಂಕ್ಷನಿಂದ ಫಾರೆಸ್ಟ್ ಕಛೇರಿ ವರೆಗೆ 750ಮೀ ಉದ್ದದ ರಸ್ತೆ ಪೂರ್ಣಗೊಂಡಿರುತ್ತದೆ.)<br>• ಒಳಚರಂಡಿ ಕಾಮಗಾರಿಯು ಶೇ. 90% ಪೂರ್ಣಗೊಂಡಿದೆ.<br>• ನಾಗುರಿ ಜಂಕ್ಷನ್ ಮತ್ತು ಫಾರೆಸ್ಟ್ ಕಛೇರಿಯ ಮಧ್ಯಭಾಗದಲ್ಲಿ 4 ಲೇನ್ ಕಾಂಕ್ರೀಟ್ ರಸ್ತೆ ಮತ್ತು ಒಳಚರಂಡಿ ರಸ್ತೆಯು ಪ್ರಗತಿಯಲ್ಲಿದೆ. |
| ಉ | ಈ ಕಾಮಗಾರಿಯೂ ಯಾವಾಗ ಮುಕ್ತಯಗೊಳಿಸಿ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಎಷ್ಟು ಅವಧಿ ಬೇಕಾಗುತ್ತದೆ (ವಿವರ ನೀಡುವುದು) | ಪಡೀಲ್ ಮತ್ತು ಪಂಪ್‌ವೆಲ್ ವರೆಗಿನ ರಸ್ತೆ ಕಾಮಗಾರಿಯನ್ನು ಜೂನ್-2024 ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು |

ಸಂಖ್ಯೆ: ನಅಇ 34 ಸಿಎಸ್‌ಎಸ್ 2024

14/02/2024

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು